**ದಿನಾಂಕಃ 09-03-2022 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ 5 ನೇ ಪ್ರತಿವಾದಿಗಳ ಪರ ಶ್ರೀ ಕೆ.ಎ.ಎಸ್. ವಕೀಲರಿಂದಃ**

ನನಗೆ ವಾದಿ ಮತ್ತು ಪ್ರತಿವಾದಿಯ ಕುಟುಂಬದ ಬಗ್ಗೆ ನನಗೆ ಪೂರ್ಣ ಮಾಹಿತಿ ಇದೆ. ವಾದಿಯ ತಂದೆ ತಾಯಿ ನನಗೆ ಮೊದಲಿನಿಂದಲೂ ಪರಿಚಯ ಎಂದರೆ ಸರಿ. ನಮ್ಮ ಮನೆ ಮತ್ತು ಅವರ ಮನೆ ಅಕ್ಕಪಕ್ಕದಲ್ಲಿ ಬರುತ್ತವೆ ಎಂದರೆ ಸರಿ. 1976 ರಲ್ಲಿ ವಾದಿ ಮತ್ತು ಪ್ರತಿವಾದಿಗಳ ಮದ್ಯೆ ಕುಟುಂಬದ ಆಸ್ತಿ ಹಂಚಿಕೆಯಾಗಿತ್ತು. ಆ ಪ್ರಕಾರ ಅವರವರ ಹೆಸರಿನಲ್ಲಿ ಖಾತೆಯಾಗಿತ್ತು ಎಂದರೆ ಸರಿ. 5 ನೇ ಪ್ರತಿವಾದಿಯು ತನ್ನ ಭಾಗಕ್ಕೆ ಬಂದ ಆಸ್ತಿಯನ್ನು 10 ನೇ ಪ್ರತಿವಾದಿಗೆ ಮಾರಿದ್ದನು ಎಂದರೆ ಸರಿ. ವಾಟ್ನಿ ಪ್ರಕಾರ ಬಂದ ಆಸ್ತಿಗಳಲ್ಲಿ ಅವರವರ ಪಾಲಿಗೆ ಬಂದ ಆಸ್ತಿಗಳಲ್ಲಿ ಕಬ್ಜೆ ವಹಿವಾಟಿನಲ್ಲಿರುತ್ತಾರೆ ಎಂದರೆ ಸರಿ. ವಾದಿಗೆ ಬರಬೇಕಾದ ಆಸ್ತಿಯನ್ನು ಅವರ ಗಂಡನ ಹೆಸರಿನಲ್ಲಿ ಒಂದು ಕ್ರಯ ಮೂಲಕ ಕೊಟ್ಟಿದ್ದಾರೆ ಎಂದರೆ ಸರಿ. ಶೆಡ್ಯೂಲ್ ಬ ದಲ್ಲಿರುವ ಆಸ್ತಿಗಳು ಈಗ ಎನ್ ಎ ಆಗಿ ಸೈಟುಗಳಾಗಿವೆ ಎಂದರೆ ಸರಿ. ಅವುಗಳಲ್ಲಿ ಆದ ಸೈಟುಗಳನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿ.

**ಪಾಟೀ ಸವಾಲುಃ 11 ನೇ ಪ್ರತಿವಾದಿಗಳ ಪರ ಶ್ರೀ ಎಸ್.ಎ.ಕೆ. ವಕೀಲರಿಂದಃ**

ನಾನು ಕೊಡಿಯಾಲ ಹೊಸಪೇಟೆಯಲ್ಲಿ ವಾಸವಾಗಿದ್ದೇನೆ. ಪ್ರತಿವಾದಿ 10 ರವರು ತೆಗೆದುಕೊಂಡಿದ್ದ ಮನೆಯಲ್ಲಿ ವಾದಿ, ಆಕೆಯ ಮಗಳು ಅಳಿಯ ವಾಸವಾಗಿದ್ದಾರೆ ಅದರಲ್ಲಿ ಆಸ್ತಿಯನ್ನು ಅದಲು ಬದಲು ಮಾಡಿಕೊಂಡು ಪ್ರತಿವಾದಿ 11 ರವರು ಕಬ್ಜೆಯಲ್ಲಿದ್ದಾರೆ ಎಂದರೆ ಸರಿಯಲ್ಲ. ಈ ವಿಷಯ ನನಗೆ ಗೊತ್ತಿಲ್ಲದಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆಸ್ತಿಗೆ ಸಂಬಂದಿಸಿದ ದಾಖಲೆಗಳನ್ನು ನೋಡಿಲ್ಲ ಎಂದರೆ ಸರಿಯಲ್ಲ. ಯಾವುದೇ ದಾಖಲೆಗಳನ್ನು ನೋಡಿಕೊಳ್ಳದೇ ತಪ್ಪು ಮಾಹಿತಿ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದುಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

Sd/-

(ಜೆ.ವಿ.ಕುಲಕರ್ಣಿ)

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.